# ಊರಿಗೆ ಬಂದ ಕತ್ತಲು



ಒಂದು ಕಾಲದಲ್ಲಿ ರಾತ್ರಿ ಎಂದರೆ ಏನೆಂಬುದು ಭೂಮಿಯಲ್ಲಿ ಯಾರಿಗೂ ಗೊತ್ತಿರಲಿಲ್ಲ. ಇಡೀ ದಿವಸ ಸೂರ್ಯನ ಪ್ರಖರವಾದ ಬಿಸಿಲು ಇರುತ್ತಿತ್ತು. ಹಗಲು ಮಾತ್ರ ಇರುತ್ತಿದ್ದುದರಿಂದ ಜನರು ಯಾವಾಗಲೂ ದುಡಿಯುತ್ತಿದ್ದರು. ರಾತ್ರಿ ವಿಶ್ರಾಂತಿ ಇರಲಿಲ್ಲ. ನಿದ್ರೆ ಮಾಡುತ್ತಿರಲಿಲ್ಲ.

ಹೀಗಿರಲು ಒಂದು ದಿನ ಬೀಲಿಂಗ್ ಎಂಬ ಮನುಷ್ಯ ನದಿಯಲ್ಲಿ ಮೀನು ಹಿಡಿಯಲು ಬಲೆ ಬೀಸಿದ. ಬಲೆಯನ್ನು ಮೇಲೆಳೆದಾಗ ಅದರಲ್ಲಿ ಬಹು ಸುಂದರಿಯಾದ ತರುಣಿಯೊಬ್ಬಳು ಸಿಲುಕಿಕೊಂಡಿದ್ದಳು. ಅವನು, 'ನೀನು ಯಾರು?'ಎಂದು ಕೇಳಿದ.

'ನಾನು ನೀರಿನ ಆಳದಲ್ಲಿರುವ ಜಲ ರಾಕ್ಷಸನ ಮಗಳು ಜೇವಿಯಾ. ಜಲಕ್ರೀಡೆ ಮಾಡುತ್ತ ಇದ್ದಾಗ ನೀನು ಬೀಸಿದ ಬಲೆಯಲ್ಲಿ ಬಿದ್ದುಬಿಟ್ಟೆ' ಎಂದು ಅವಳು ಹೇಳಿದಳು. ಬೀಲಿಂಗ್ ಅವಳೊಂದಿಗೆ, 'ನೀನು ನನ್ನನ್ನು ಮದುವೆಯಾಗುವೆಯಾ? ನಿನ್ನನ್ನು ತುಂಬ ಸುಖದಿಂದ ಇರುವಂತೆ ನೋಡಿಕೊಳ್ಳುತ್ತೇನೆ' ಎಂದು ಕೇಳಿದ. ತರುಣಿ ಅವನ ಮಾತಿಗೆ ಸಮ್ಮತಿಸಿದಳು.

ಬೀಲಿಂಗ್ ಜೇವಿಯಾಳನ್ನು ಮನೆಗೆ ಕರೆತಂದು ಮದುವೆಯಾಗಿ ಸಂಸಾರ ಆರಂಭಿಸಿದ. ಆದರೆ ನೀರಿನ ಆಳದಲ್ಲಿ ತಂಪಾದ ಅರಮನೆಯಲ್ಲಿದ್ದ ಅವಳಿಗೆ ಇಲ್ಲಿ ಸೂರ್ಯನ ತೀಕ್ಷ್ಣವಾದ ಬಿಸಿಲನ್ನು ಸಹಿಸಲು ಸಾಧ್ಯವೇ ಆಗಲಿಲ್ಲ. ಮೈತುಂಬ ಬೊಕ್ಕೆಗಳಾದವು. ಅವಳು ಸೊರಗಿ ಕಡ್ಡಿಯಂತಾಗಿ ಹಾಸಿಗೆ ಹಿಡಿದಳು. ಹೆಂಡತಿಯ ಈ ಸ್ಥಿತಿ ಕಂಡು ಬೀಲಿಂಗ್‌ನಿಗೆ ತುಂಬ ದುಃಖವಾಯಿತು. 'ನನಗೆ ನಿನ್ನನ್ನು ಕಳೆದುಕೊಳ್ಳುವುದಕ್ಕೆ ಕೊಂಚವೂ ಇಷ್ಟವಿಲ್ಲ. ನೀನು ಸುಖದಿಂದ ಇರಬೇಕಾದರೆ ನಾನು ಏನು ಮಾಡಬೇಕು?' ಎಂದು ಕೇಳಿದ.

'ಸೂರ್ಯನ ಬಿಸಿಲು ಇಲ್ಲಿ ಸದಾಕಾಲ ಇರುವ ಕಾರಣ ಯಾರಿಗೂ ಸುಖವಿರಲು ಸಾಧ್ಯವಿಲ್ಲ. ಇದರಿಂದ ಪಾರಾಗಲು ಕೊಂಚವಾದರೂ ನೆರಳು ಬೇಕು. ನನಗಾಗಿ ಸ್ವಲ್ಪ ನೆರಳನ್ನು ತಂದುಕೊಡಲು ನಿನ್ನಿಂದ ಸಾಧ್ಯವಾದರೆ ನಾನೂ ಬದುಕಬಹುದು. ಎಲ್ಲರಿಗೂ ಸುಖ ದೊರಕಬಹುದು' ಎಂದಳು ಜೇವಿಯಾ. ಬೀಲಿಂಗ್‌ನಿಗೆ ಆಶ್ಚರ್ಯ. ನೆರಳು ಎಂಬ ಪದವನ್ನು ಕೇಳಿಯೇ ಅವನಿಗೆ ಗೊತ್ತಿರಲಿಲ್ಲ. 'ನೆರಳು ಎಲ್ಲಿ ಸಿಗುತ್ತದೆ ಹೇಳಬಲ್ಲೆಯಾ? ನಾನು ಬಲಶಾಲಿಗಳಾದ ನನ್ನ ಆಳುಗಳನ್ನು ಕಳುಹಿಸಿ ಎಷ್ಟು ಬೇಕಾದರೂ ತರಿಸಿ ಕೊಡುತ್ತೇನೆ' ಎಂದು ಹೇಳಿದ.

'ನದಿಯ ಬಹು ಆಳದಲ್ಲಿ ಸೂರ್ಯನ ಬಿಸಿಲು ಪ್ರವೇಶಿಸುವುದಿಲ್ಲ. ಅಲ್ಲಿ ನೆರಳಿದೆ, ತುಂಬ ತಂಪಾಗಿದೆ. ಒಂದು ಗೋಣಿಚೀಲ ತೆಗೆದುಕೊಂಡು ಇಬ್ಬರು ಆಳುಗಳು ಹೋಗಿ ನೆರಳನ್ನು ತುಂಬಿಸಿ ತರಬೇಕು. ನನ್ನ ತಂದೆಯ ಬಳಿ ಕೇಳಿದರೆ ನೆರಳನ್ನು ತರಲು ಅಡ್ಡಿ ಮಾಡುವುದಿಲ್ಲ. ಆದರೆ ಯಾವುದೇ ಕಾರಣಕ್ಕೂ ಅದನ್ನು ಒಂದೇ ಸಲ ಚೀಲದಿಂದ ಹೊರಗೆ ತೆಗೆದು ಬಿಡಬಾರದು. ಹಾಗೆಲ್ಲಾದರೂ ಕೈಮೀರಿದರೆ ಅನಾಹುತವಾಗಬಹುದು' ಎಂದಳು ಜೇವಿಯಾ.

ಬೀಲಿಂಗ್ ಬಲಶಾಲಿಗಳಾದ ತನ್ನ ಇಬ್ಬರು ಆಳುಗಳನ್ನು ಕರೆದ. ಒಂದು ಗೋಣಿಚೀಲವನ್ನು ಕೊಟ್ಟ. 'ನೀವಿಬ್ಬರೂ ನದಿಯ ಆಳಕ್ಕಿಳಿದು ಹೋಗಬೇಕು. ಅಲ್ಲಿ ಜಲರಾಕ್ಷಸನ ಅರಮನೆಯಿದೆ. ಅವನ ಮಗಳು ಇಲ್ಲಿ ಸುಖವಾಗಿರುವುದನ್ನು ತಿಳಿಸಿ ಅವಳಿಗಾಗಿ ಒಂದು ಗೋಣಿಚೀಲದಷ್ಟು ನೆರಳನ್ನು ಕೊಡಬೇಕು ಎಂದು ಕೇಳಿ ತುಂಬಿಸಿಕೊಳ್ಳಬೇಕು. ಚೀಲದ ಬಾಯಿಯನ್ನು ಭದ್ರವಾಗಿ ಕಟ್ಟಬೇಕು. ಯಾವುದೇ ಕಾರಣಕ್ಕೂ ದಾರಿಯ ನಡುವೆ ಚೀಲದ ಬಾಯಿ ಬಿಡಿಸಬಾರದು' ಎಂದು ಎಚ್ಚರಿಕೆ ನೀಡಿ ಕಳುಹಿಸಿದ.